ಓ.ಎಸ್. ನಂಃ **77/2023**
<u>ಪಿಡಬ್ಲ್ಯೂಃ **2**</u>

ದಿನಾಂಕಃ 25-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಂ ವಿ ಕೆ ವಕೀಲರಿಂದಃ</u>

12. ಈ ದಾವೆ ದಾಖಲಿಸುವ ಮೊದಲು ಒಂದು ವರ್ಷದ ಹಿಂದೆ ದಾವಾ ಜಮೀನು ಅಳತೆ ಮಾಡಿಸಿದ್ದೆವು. ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಿ ಅದು ಭೂ ಮಾಪಕರು ನಿಮ್ಮ ಜಮೀನು ಅಳತೆ ಮಾಡಿ ನೀಡಿದ ನಕಾಶೆ ಆಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಸರಿ ಎಂದು ನುಡಿದಿದ್ದು ನಕಾಶೆಯನ್ನು ಹಾಗೂ ಅದರೊಂದಿಗಿನ ನೋಟಿಸ್ ಹಾಗೂ ಹೇಳಿಕೆ ಪತ್ರಗಳ ದೃಡೀಕೃತ ನಕಲು ಪ್ರತಿಗಳನ್ನು ಒಟ್ಟಾಗಿ ನಿಡಿ-1 ಎಂದು ಗುರುತಿಸಲಾಯಿತು. ನಾವು ಪ್ರತೀ ಎಕರೆಗೆ ರೂ.1 ಲಕ್ಷ 50 ಸಾವಿರದಂತೆ ಜಮೀನು ಖರೀದಿ ಮಾಡಿದ್ದೆವು. ಒಟ್ಟು 4 ಲಕ್ಷ 50 ಸಾವಿರಗಳಿಗೆ ಖರೀದಿ ಮಾಡಿದ್ದೆವು. 03 ಎಕರೆಗೆ ರೂ.4 ಲಕ್ಷ 50 ಸಾವಿರ ಕೊಟ್ಟು ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ತಮಗೆ ಸ್ವಾದೀನ ನೀಡಿದ ಜಮೀನಿಗೆ ಸಂಬಂಧಿಸಿದಂತೆ ಮಾತ್ರ ಖರೀದಿದಾರರು ಮಾರಾಟಗಾರರಿಗೆ ಹಣ ಪಾವತಿ ಮಾಡುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ, ಸಂಪೂರ್ಣ ಖರೀದಿ ಜಮೀನಿನ ಮೊತ್ತ ಪಾವತಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಕೇವಲ ರೂ.3 ಲಕ್ಷ 50 ಸಾವಿರ ಮಾತ್ರ ನೀಡಿರುವುದಾಗಿ ಖರಿದಿ ಪತ್ರದಲ್ಲಿ ನಮೂದು ಇದೆ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ನೀವು ಜಮೀನು ಖರೀದಿ ಮಾಡುವ ಪೂರ್ವದಲ್ಲಿಯೇ ಜಮೀನಿನಲ್ಲಿ ರಸ್ತೆ, ಶಾಲೆ ಹಾಗೂ ಪ್ರತಿವಾದಿಯರ ಮನೆಗಳು ಇದ್ದವು ಎಂದರೆ ಸಾಕ್ಷಿಯು ಆಗ ಮನೆಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಆಗ ಮನೆಗಳು ಇರಲಿಲ್ಲ ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ರಿಂದ 10 ನೇ ಪ್ರತಿವಾದಿಯರು ಸುಮಾರು 25-30 ವರ್ಷಗಳಿಂದ ದಾವಾ ಜಮೀನಿನ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರು ದಾವಾ ಜಮೀನಿನ ಸ್ವಾದೀನದಲ್ಲಿ ಇರುವ ಬಗ್ಗೆ ಇಂದಿರಾ ರವರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ.

13. ಇಂದಿರಾ ರವರು ಮೊದಲಿನಿಂದಲೂ ಬೇರೆ ಕಡೆಗೆ ವಾಸವಾಗಿದ್ದಾರೆ, ಚಂಡರಕಿ ಮತ್ತು ಮಡೆಪಲ್ಲಿ ವಾಸವಾಗಿಲ್ಲ ಎಂದರೆ ಸರಿ. ಇಂದಿರಾ ರವರ ಕುಟುಂಬದ ಸದಸ್ಯರು ಸಹ ಸದರಿ ಗ್ರಾಮಗಳಲ್ಲಿ ವಾಸವಾಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ, ಅವರ ಅಣ್ಣ ಕಿಶನ್ ರಾವ್ ರವರು ವಾಸವಾಗಿರತ್ತಾರೆ ಎಂದು ನುಡಿಯುತ್ತಾರೆ. ಸದರಿ ಕಿಶನ್ ರಾವ್ ರವರ ಇಂದಿರಾ ರವರ

ಸ್ವಂತ ಅಣ್ಣ ಆಗಿರುತ್ತಾರೆ. ಜಮೀನಿನ ವ್ಯವಹಾರವನ್ನು ಕಿಶಾನ್ ರಾವ್ ರವರೇ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

14. 1 ನೇ ಪ್ರತಿವಾದಿ ದಾವಾ ಜಮೀನಿನಲ್ಲಿ ಆಸ್ತಿ ಖರೀದಿಸಿದ್ದು, ಆತ ಪಂಚಾಯಿತಿಯಿಂದ ನಮೂನೆ 12 ಹಾಗೂ ವಿದ್ಯೂತ್ ಸಂಪರ್ಕ ಸಹ ಪಡೆದುಕೊಂಡಿದ್ದಾರೆ ಮತ್ತು ಕರ ಪಾವತಿ ಸಹ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅವರ ಮನೆಗೆ ಪಂಚಾಯಿತಿ ಯವರು 1-106/1 ಎಂದು ನಂಬರನ್ನು ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಪ್ರತಿವಾದಿಯ ಮನೆಗೆ ಪಂಚಾಯಿತಿಯವರು 1-162 ಎಂದು ನಂಬರು ನೀಡಿದ್ದು ಆತ ಸಹ ಪಂಚಾಯಿತಿಯಿಂದ ನಮೂನೆ 12 ನ್ನು ಪಡೆದುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 3 ನೇ ಪ್ರತಿವಾದಿಯ ಮನೆಗೆ ಪಂಚಾಯಿತಿಯವರು 1-163 ಎಂದು ನಂಬರು ನೀಡಿದ್ದು ಆತ ಸಹ ಪಂಚಾಯಿತಿಯಿಂದ ನಮೂನೆ 12 ನ್ನು ಹಾಗೂ ವಿದ್ಯೂತ್ ಸಂಪರ್ಕ ಪಡೆದುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 4 ನೇ ಪ್ರತಿವಾದಿಯ ಮನೆಗೆ ಪಂಚಾಯಿತಿಯವರು 1-117 ಎಂದು ನಂಬರು ನೀಡಿದ್ದು ಆತ ಸಹ ಪಂಚಾಯಿತಿಯಿಂದ ನಮೂನೆ 12 ನ್ನು ಹಾಗೂ ವಿದ್ಯೂತ್ ಸಂಪರ್ಕ ಪಡೆದುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 5 ನೇ ಪ್ರತಿವಾದಿಯ ಮನೆಗೆ ಪಂಚಾಯಿತಿಯವರು 1-167 ಎಂದು ನಂಬರು ನೀಡಿದ್ದು ಅವರೂ ಸಹ ಪಂಚಾಯಿತಿಯಿಂದ ನಮೂನೆ 12 ನ್ನು ಹಾಗೂ ವಿದ್ಯೂತ್ ಸಂಪರ್ಕ ಪಡೆದುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 6 ನೇ ಪ್ರತಿವಾದಿಯ ಮನೆಗೆ ಪಂಚಾಯಿತಿಯವರು 1-160 ಎಂದು ನಂಬರು ನೀಡಿದ್ದು ಆತ ಸಹ ಪಂಚಾಯಿತಿಯಿಂದ ನಮೂನೆ 12 ನ್ನು ಪಡೆದುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 7 ನೇ ಪ್ರತಿವಾದಿಯ ಮನೆಗೆ ಪಂಚಾಯಿತಿಯವರು 1-116 ಎಂದು ನಂಬರು ನೀಡಿದ್ದು ಆತ ಸಹ ಪಂಚಾಯಿತಿಯಿಂದ ನಮೂನೆ 12 ನ್ನು ಹಾಗೂ ವಿದ್ಯೂತ್ ಸಂಪರ್ಕ ಪಡೆದುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ 8 ನೇ ಪ್ರತಿವಾದಿಯ ಮನೆಗೆ ಪಂಚಾಯಿತಿಯವರು 1-115 ಎಂದು ನಂಬರು ನೀಡಿದ್ದು ಆತ ಸಹ ಪಂಚಾಯಿತಿಯಿಂದ ನಮೂನೆ 12 ನ್ನು ಹಾಗೂ ವಿದ್ಯೂತ್ ಸಂಪರ್ಕ ಪಡೆದುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 9 ಮತ್ತು 10 ನೇ ಪ್ರತಿವಾದಿಯರು ತಮ್ಮ ಖಾಲಿ ಜಾಗದಲ್ಲಿ ಬಣವೆ ಹಾಕಿಕೊಂಡು ದನ ಕಟ್ಟಿ ತಿಪ್ಪೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು 25-30 ವರ್ಷಗಳಿಂದ ದಾವಾ ಜಮೀನಿನ ಸ್ವಾದೀನದಲ್ಲಿ ಇದ್ದು ಇಂದಿರಾ ಹಾಗೂ ಕಿಶನ್ ರಾವ್ ರವರ ಒಪ್ಪಿಗೆಯ ಮೇರೆಗೆ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

15. ಇಂದಿರಾ ರವರು ಕೇವಲ 01 ಎಕರೆ ಜಮೀನಿನ ಸ್ವಾಧೀನದಲ್ಲಿ ಇದ್ದುದ್ದರಿಂದ ಅವರಿಗೆ 03 ಎಕರೆ ಜಮೀನು ಮಾರಾಟ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಇಂದಿರಾ ರವರು ನಮಗೆ ಖರೀದಿ ಪತ್ರದ ಪ್ರಕಾರ 01 ಎಕರೆ ಜಮೀನಿನ ಸ್ವಾಧೀನ ಮಾತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಖರೀದಿ ಮಾಡಿಕೊಳ್ಳುವ ಪೂರ್ವದಲ್ಲಿಯೇ ಈ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಇದ್ದರೂ ಸಹ 03 ಎಕರೆಗೆ ಸಂಬಂದಿಸಿದಂತೆ ಖರೀದಿ ಪತ್ರ ಮಾಡಿಕೊಂಡು ಪ್ರತಿವಾದಿಯರಿಗೆ ತೊಂದರೆ ನೀಡಲು ದಾವೆ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಮನೆ ಕಟ್ಟಿಕೊಳ್ಳಲು ಕಿಶನ್ ರಾವ್ ರವರು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದು ಅದಕ್ಕೆ ಇಂದಿರಾ ರವರು ಸಹ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ